# ನಗಿಸಿದರೆ ಬೆದರಿಕೆ ಕರೆಯೂ ಬರುವುದು ಕುನಾಲ್

ರಾಜಕೀಯ ಸ್ಟ್ಯಾಂಡ್ ಅಪ್ ಕಾಮಿಡಿ ಮೂಲಕ ಹೆಸರಾದ ಕುನಾಲ್ ಕಾಮ್ರ, ನಗೆಗುಳಿಗೆಗಳ ಪರಿಣಾಮಗಳ ಬಗ್ಗೆಯೂ ಇಲ್ಲಿ ಮಾತಾಡಿದ್ದಾರೆ.



ಮೂವತ್ತು ವಯಸ್ಸಿನ ಕುನಾಲ್ ಕಾಮ್ರ ರಾಜಕೀಯ ಸ್ಟ್ಯಾಂಡ್–ಅಪ್ ಕಾಮಿಡಿಯನ್ ಆಗಿ ಹೆಸರಾದವರು. ‘ಮಾತನಾಡಲು ನಾನೇನೂ ಕಡಿದು ಕಟ್ಟೆ ಹಾಕಿಲ್ಲ’ ಎಂದೇ ಅವರು ‘ಸುಧಾ’ ನಿಯತಕಾಲಿಕೆಗೆ ಕೆಲವೇ ಸಾಲುಗಳ ಪ್ರತಿಕ್ರಿಯೆ ನೀಡಿದರು.

2017ರಲ್ಲಿ ಸರ್ಕಾರದ ‘ರಾಷ್ಟ್ರೀಯತೆ’ ಪರಿಕಲ್ಪನೆ ಕುರಿತ ಅಭಿಪ್ರಾಯವಿರುವ ವಿಡಿಯೊವೊಂದನ್ನು ಕುನಾಲ್ ಮೊದಲು ಯೂಟ್ಯೂಬ್ ಹಾಕಿದರು. ಎಂಟು ನಿಮಿಷಗಳ ಆ ವಿಡಿಯೊ ವೈರಲ್ ಆದದ್ದೇ ಅವರು ಸ್ಟ್ಯಾಂಡ್–ಅಪ್ ಹಾಸ್ಯಗಾರರಾಗಿ ಗುರುತಾಗತೊಡಗಿದರು. ಮೂವತ್ತು ವಯಸ್ಸಿನ ಕುನಾಲ್ ವ್ಯಂಗ್ಯದ ಪಂಚ್‌ಲೈನ್‌ಗಳನ್ನು ತಣ್ಣಗಿನ ದನಿಯಲ್ಲಿ, ಆಡುಮಾತಿನಲ್ಲಿ ದಾಟಿಸುವುದರಲ್ಲಿ ನಿಷ್ಣಾತರು. ‘ಶಟ್ ಅಪ್ ಯಾ ಕುನಾಲ್’ ಎಂಬ ಕೆಲವು ಕಂತುಗಳ ಸುದೀರ್ಘ ಸಂದರ್ಶನಗಳನ್ನು, ಸಂವಾದಗಳನ್ನೂ ಅವರು ನಡೆಸಿಕೊಟ್ಟಿದ್ದಾರೆ. ಅದರಲ್ಲಿ ವಿವಿಧ ಪಕ್ಷಗಳ ರಾಜಕಾರಣಿಗಳು, ವಕ್ತಾರರು, ಹೋರಾಟಗಾರರು, ಬರಹಗಾರರು–ಬರಹಗಾರ್ತಿಯರು ಕಾಣಿಸಿಕೊಂಡರು. ತಾವು ನಂಬಿದ ಸಿದ್ಧಾಂತಕ್ಕೆ ಸಂಬಂಧಿಸಿದ ಸಾಲುಗಳಿರುವ ಟಿ–ಶರ್ಟ್‌ಗಳನ್ನು ತೊಟ್ಟು ಕಾರ್ಯಕ್ರಮಕ್ಕೆ ಒಂದು ‘ವಿಷುಯಲ್ ಸೆನ್ಸ್’ ಕೊಡುವುದನ್ನು ಅವರು ತಮ್ಮತನ ಎಂದು ಭಾವಿಸಿದ್ದಾರೆ.

‘ನಾನು ಮುಂಬೈನವ. ಮಧ್ಯಮವರ್ಗದ ಕುಟುಂಬದವನು. ಅಪ್ಪ–ಅಮ್ಮ ಕೆಮಿಸ್ಟ್ ಶಾಪ್ ನಡೆಸುತ್ತಿದ್ದರು. ಹೇಗಾದರೂ ಹಣ ಮಾಡಬೇಕು ಎನ್ನುವುದಷ್ಟೇ ನನ್ನ ಗುರಿಯಾಗಿತ್ತು.


ಆರೋಗ್ಯಕರವಾದ ಸವಿಯನ್ನು ಆನಂದಿಸಿ

Along with HERBS
100% NATURAL
ARECA TEA
HEALTHY • TASTY • REFRESHING

ಇತರ ಚಹಾಗಳಿಗಿಂತ ಹೆಚ್ಚಿನ ಆ್ಯಂಟಿಆಕ್ಸಿಡೆಂಟ್ ಗುಣಗಳನ್ನು ಹೊಂದಿದೆ.
ಮಧುಮೇಹ ನಿರ್ವಹಣೆಯಲ್ಲಿ ಸಾಬೀತಾಗಿದೆ.
ಕೊಲೆಸ್ಟ್ರಾಲ್ ಅನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ.
ಶಕ್ತಿಯನ್ನು ಹೆಚ್ಚಿಸುತ್ತದೆ.
ಒತ್ತಡವನ್ನು ನಿವಾರಿಸುತ್ತದೆ.
ದೀರ್ಘಕಾಲೀನ ಬಳಕೆಯಲ್ಲಿ ಸುರಕ್ಷಿತ.

ಅರೆಕಾ ಟೀ ಒಂದು ಉತ್ತಮ ಆಯ್ಕೆ




ಆರೋಗ್ಯಕರ • ರುಚಿಕರ • ಉಲ್ಲಾಸಕರ

5 ರುಚಿಕರ ಸ್ವಾದಗಳಲ್ಲಿ ಲಭ್ಯ
ಪುದೀನ, ಶುಂಠಿ, ರೆಗ್ಯುಲರ್, ನಿಂಬೆ ಮತ್ತು ತುಳಸಿ

WORLD'S FIRST ARECA TEA
INNOVATIVE PRODUCT OF THE YEAR 2015 MAKE IN INDIA EXCELLENCE AWARD
ENTREPRENEURIAL INNOVATION 2017
BEST AGRO FOOD STARTUP 2018

ಪ್ರಮೋಟರ್ಸ್: ಗ್ರೀನ್ ರೆಮೆಡೀಸ್, ಉಡುಪಿ
+91 820 252 9023
ಕಸ್ಟಮರ್ ಕೇರ್ ನಂ:
+91 80 2672 6337 / +91 63610 08174
ಇ ಮೇಲ್: info@arecatea.in
ಆನ್‌ಲೈನ್ ನಲ್ಲಿ ಖರೀದಿಸಿ
amazon | bigbasket India's largest online supermarket | Flipkart
www.arecatea.in ನಲ್ಲೂ ಲಭ್ಯ